

ಇದು ಎಂಥ ಹಾಡು
ಮನುವಂಶ ಪಟ್ಟಿಹ ಪಾಡನೆಲ್ಲ ಹೊತ್ತಿಸಿ
ನಮ್ಮ
ಮರವಟ್ಟ ಮನಗಳಲ್ಲಿ ಉರಿಯಂತೆ
ಕಾಡುವುದು

ಚಿತ್ತಾಲರಿಗೆ ಕಾವ್ಯವೆಂದರೆ, ಗಾಢವಾದ ವೈಯಕ್ತಿಕ ಅನುಭವವೂ ವಿಸ್ತಾರವಾದ ವಿಶ್ವಾತ್ಮಕ ನೆಲೆಯಲ್ಲಿಯೂ ಅರ್ಥಪೂರ್ಣವಾಗಿರಬೇಕು. ಅವರ ಮುಖ್ಯ ಕಾಳಜಿಗಳು ಮನುಕುಲದ ಪಾಡು, ಬದುಕಿನ ಆಗುಹೋಗುಗಳನ್ನು ನಿಯಂತ್ರಿಸುವ 'ಅನ್ಯ' ಕೇಂದ್ರ ಯಾವುದು ಎನ್ನುವುದರ ಬಗೆಗಿನ ಜಿಜ್ಞಾಸೆ. ಈ ಕೇಂದ್ರವು ನಿಯಮಿಸುವ ಪರಿಧಿಯೊಳಗಡೆಗೆ ಮನುಷ್ಯ ಜೀವಿಗಳ ಕರ್ತೃತ್ವವೇನು, ಅವರ ಸ್ವಾಯತ್ತತೆಯ ಪರಿಯೇನು, ಜವಾಬ್ದಾರಿಗಳು ಏನು, ಮತ್ತು ಇವೆಲ್ಲ ಪ್ರಶ್ನೆಗಳ ಆಚೆಗೆ ಗೂಢವಾಗಿಯೇ ಉಳಿಯುವ ಮನುಷ್ಯ ಅಸ್ತಿತ್ವದ ಅನೇಕ ಪ್ರಶ್ನೆಗಳು. ಆದ್ದರಿಂದ ತಂದೆಯ ಆತ್ಮಹತ್ಯೆ, ತಾಯಿಯ ಸಾವು, ಸ್ವತಃ ಅವರನ್ನೇ ಕೊನೆವರೆಗೆ ಹಿಂಸಿಸಿದ ರೋಗ, ಇವೆಲ್ಲವುಗಳ ಬಗ್ಗೆ ಬರೆದ ಪದ್ಯಗಳು ವೈಯಕ್ತಿಕ ನೋವುಗಳ ಬಗ್ಗೆ ಅದೆಷ್ಟು ಮೂರ್ತವಾಗಿದ್ದರೂ ಅವುಗಳಿಂದ ಹುಟ್ಟುವ ಜಿಜ್ಞಾಸೆ ಮಾತ್ರ ವಿಶ್ವಾತ್ಮಕ ನೆಲೆಯಲ್ಲಿ, ತಾತ್ವಿಕತೆಯ ಮೂಲಕ ವಿಶ್ಲೇಷಣೆಗೆ ದಾರಿಮಾಡಿಕೊಡುತ್ತವೆ. ಅವರ ಕಾವ್ಯದ ಅರ್ಥಪೂರ್ಣ ಸಾಧನೆಯೆಂದರೆ, ಈ ಎರಡೂ ಅಂಶಗಳ ನಡುವೆ ಅವರು ಸಾಧಿಸುವ ಸಮತೋಲ. 'ದುಃಖಗೀತೆ'ಯಂಥ ಪದ್ಯಗಳಿಂದಾಗಿ ಚಿತ್ತಾಲರು ತಾತ್ವಿಕ